# ರಾಮಕೃಷ್ಣ ಸುದ್ದಿ ಸಂಚಯ

ESTD : 1994

**ಶ್ರೀ ರಾಮಕೃಷ್ಣ ಕ್ರೆಡಿಟ್ ಕೋ-ಓಪರೇಟಿವ್ ಸೊಸೈಟಿ ಲಿ., ಮಂಗಳೂರು**

ಇದರ ಮುಖವಾಣಿ ತ್ರೈಮಾಸಿಕ ಸುದ್ದಿ ಪತ್ರಿಕೆ

ವಿಳಾಸ : 2ನೇ ಮಹಡಿ, ಅಮೃತೋತ್ಸವ ಕಟ್ಟಡ, ಬಂಟ್ಸ್ ಹಾಸ್ಟೆಲ್ ಸರ್ಕಲ್, ಮಂಗಳೂರು–575 003.

Website : www.ramakrishnacredit.com Email : ho@ramakrishnacredit.com

ಸಂಪುಟ : VII ಸಂಚಿಕೆ : 2 ಎಲ್ಲರೂ ಒಬ್ಬನಿಗಾಗಿ, ಒಬ್ಬನು ಎಲ್ಲರಿಗಾಗಿ ಜುಲೈ – ಸಪ್ಟೆಂಬರ್ 2022


## ಅಧ್ಯಕ್ಷರ ಮಾತು



ಶ್ರೀ ಕೆ. ಜೈರಾಜ್ ಬಿ. ರೈ
ಅಧ್ಯಕ್ಷರು

### ರೂ.750 ಕೋಟಿಯನ್ನು ಮೀರಿದ ಒಟ್ಟು ವ್ಯವಹಾರ

ದಿನಾಂಕ 30.09.2022ಕ್ಕೆ ರೂ.411 ಕೋಟಿ ಠೇವಣಿ, ರೂ.342 ಕೋಟಿ ಸಾಲದೊಂದಿಗೆ ಒಟ್ಟು ವ್ಯವಹಾರ ರೂ.753 ಕೋಟಿಯನ್ನು ಮೀರಿದೆ, ಇದನ್ನು 30.09.2021ಕ್ಕೆ ಹೋಲಿಸುವಾಗ ವ್ಯವಹಾರದಲ್ಲಿ ರೂ.139 ಕೋಟಿ ಹೆಚ್ಚಳವಾಗಿ, (ಠೇವಣಿ ರೂ.79 ಕೋಟಿ ಮತ್ತು ಸಾಲ ರೂ.60 ಕೋಟಿ) ಶೇ.23 ವೃದ್ಧಿಯಾಗಿರುತ್ತದೆ. ನಿವ್ವಳ ಲಾಭ ರೂ.2.93 ಕೋಟಿಯಾಗಿದ್ದು, Net NPA (ಅನುತ್ಪಾದಕ ಆಸ್ತಿ) ಶೂನ್ಯ ಪ್ರಮಾಣದಲ್ಲಿರುತ್ತದೆ ಎಂದು ತಿಳಿಸಲು ಸಂತೋಷಪಡುತ್ತೇವೆ.

**ಸಂಘವು ದಿನಾಂಕ 30.09.2022ಕ್ಕೆ ಸಾಧಿಸಿದ ಪ್ರಗತಿಯನ್ನು ದಿನಾಂಕ 30.09.2021ಕ್ಕೆ ಹೋಲಿಸಿ, ಪ್ರಗತಿಯ ಪಕ್ಷಿನೋಟ ಈ ಕೆಳಗಿನಂತಿದೆ.**

| ಕ್ರ. ಸಂ. | ಕಾರ್ಯ ವಿಭಾಗ | ಸಪ್ಟೆಂಬರ್ 2021ಕ್ಕೆ ಇದ್ದಂತೆ (ರೂ) | ಸಪ್ಟೆಂಬರ್ 2022ಕ್ಕೆ ಇದ್ದಂತೆ (ರೂ) | ಹೆಚ್ಚಳ (ರೂ) | ಶೇ. ವೃದ್ಧಿ |
|---|---|---|---|---|---|
| 1 | ಠೇವಣಾತಿ | ರೂ.332 ಕೋಟಿ | ರೂ.411 ಕೋಟಿ | ರೂ.79 ಕೋಟಿ | 24% |
| 2 | ಸಾಲ ಮತ್ತು ಮುಂಗಡ | ರೂ.282 ಕೋಟಿ | ರೂ.342 ಕೋಟಿ | ರೂ.60 ಕೋಟಿ | 21% |
| 3 | ಒಟ್ಟು ವ್ಯವಹಾರ | ರೂ.614 ಕೋಟಿ | ರೂ.753 ಕೋಟಿ | ರೂ.139 ಕೋಟಿ | 23% |
| 4 | ನಿವ್ವಳ ಲಾಭ | ರೂ.2.83 ಕೋಟಿ | ರೂ.2.93 ಕೋಟಿ | ರೂ.10 ಲಕ್ಷ | – |
| 5 | ನಿವ್ವಳ ಅನುತ್ಪಾದಕ ಆಸ್ತಿ | 0% | 0% | – | – |

1. ಸಂಘದ ಒಟ್ಟು ಠೇವಣಾತಿಯು ₹411 ಕೋಟಿಯಷ್ಟಿದ್ದು, 2021ರ ಸಪ್ಟೆಂಬರ್‌ಗಿಂತ ₹79 ಕೋಟಿ ಹೆಚ್ಚಳಗೊಂಡು, ಶೇ.24 ರಷ್ಟು ವೃದ್ಧಿಗೊಂಡಿರುವುದು,
2. ಹೊರಬಾಕಿ ಸಾಲವು ₹342 ಕೋಟಿಯಷ್ಟಿದ್ದು, 2021ರ ಸಪ್ಟೆಂಬರ್‌ಗಿಂತ ₹60 ಕೋಟಿ ಹೆಚ್ಚಳಗೊಂಡು ಶೇ.21ರಷ್ಟು ವೃದ್ಧಿಗೊಂಡಿರುವುದು,
3. ಒಟ್ಟು ವ್ಯವಹಾರವು ₹753 ಕೋಟಿಯಷ್ಟಿದ್ದು, 2021ರ ಸಪ್ಟೆಂಬರ್‌ಗಿಂತ ₹139 ಕೋಟಿ ಹೆಚ್ಚಳಗೊಂಡು, ಶೇ.23 ರಷ್ಟು ವೃದ್ಧಿಯಾಗಿರುವುದು,
4. 30.09.2021ಕ್ಕೆ ಸಂಘವು ₹2.83 ಕೋಟಿ ನಿವ್ವಳ ಲಾಭ ಗಳಿಸಿದ್ದು, 30.09.2022ಕ್ಕೆ ನಿವ್ವಳ ಲಾಭವು ₹2.93 ಕೋಟಿಯಾಗಿ, ಈ ಅವಧಿಯಲ್ಲಿ ಲಾಭವು ₹10 ಲಕ್ಷ ಹೆಚ್ಚಳವಾಗಿರುವುದು.

ಸಂಘದ ಮೇಲೆ ಸದಸ್ಯ ಠೇವಣಿದಾರರು ಇಟ್ಟಿರುವ ಅದಮ್ಯ ವಿಶ್ವಾಸ, ಸಾಲಗಾರ ಸದಸ್ಯರ ಸಹಕಾರ, ಸಂಘದ ಆಡಳಿತ ಮಂಡಳಿ ಸದಸ್ಯರ ಮಾರ್ಗದರ್ಶನ, ಎಲ್ಲಾ ಶಾಖಾ ಸಲಹಾ ಸಮಿತಿ ಅಧ್ಯಕ್ಷರು ಹಾಗೂ ಸದಸ್ಯರುಗಳ ಸಹಭಾಗಿತ್ವ, ಸಂಘದ ಶಾಖಾಧಿಕಾರಿಗಳು ಮತ್ತು ಸಿಬ್ಬಂದಿಗಳ ಅಪಾರ ಶ್ರಮ, ಸಂಘದ ವ್ಯವಹಾರ ಅತ್ಯುತ್ತಮವಾಗಿ ವೃದ್ಧಿಯಾಗಲು ಕಾರಣವಾಗಿದೆ. ನಿಮಗೆಲ್ಲರಿಗೂ ನನ್ನ ವೈಯಕ್ತಿಕ ನೆಲೆಯಲ್ಲಿ ಹಾಗೂ ಸಂಘದ ವತಿಯಿಂದ ಹೃತ್ಪೂರ್ವಕ ಅಭಿನಂದನೆಗಳನ್ನು ತಿಳಿಸುತ್ತಿದ್ದೇನೆ.

ಮುಂದಿನ ದಿನಗಳಲ್ಲೂ ಕೂಡ ತಮ್ಮೆಲ್ಲರ ಇದೇ ರೀತಿಯ ಸಹಕಾರದೊಂದಿಗೆ, ಸಂಘವನ್ನು ಇನ್ನಷ್ಟು ಪ್ರಗತಿ ಮತ್ತು ಸದೃಢತೆಯತ್ತ ಮುನ್ನಡೆಸಲು ಸಾಧ್ಯವಾಗುವುದೆಂದು ಭರವಸೆಯನ್ನು ವ್ಯಕ್ತಪಡಿಸುತ್ತೇನೆ.

**(ಕೆ. ಜೈರಾಜ್ ಬಿ. ರೈ)**
**ಅಧ್ಯಕ್ಷರು**

# ಸಂಘದ 28ನೇ ವಾರ್ಷಿಕ ಮಹಾಸಭೆ 2021–22ನೇ ಸಾಲಿಗೆ ಶೇ.25 ಡಿವಿಡೆಂಡ್




ಶ್ರೀ ರಾಮಕೃಷ್ಣ ಕ್ರೆಡಿಟ್ ಕೋ–ಓಪರೇಟಿವ್ ಸೊಸೈಟಿಯ 28ನೇ ವಾರ್ಷಿಕ ಮಹಾಸಭೆ, ಸಂಘದ ಅಧ್ಯಕ್ಷರಾದ ಶ್ರೀ ಕೆ. ಜೈರಾಜ್ ಬಿ. ರೈ ಯವರ ಅಧ್ಯಕ್ಷತೆಯಲ್ಲಿ ಮಂಗಳೂರಿನ ಉರ್ವ ಸೆಂಟನರಿ ಚರ್ಚ್ ಹಾಲ್ ನಲ್ಲಿ ದಿನಾಂಕ 28.08.2022 ರಂದು ಜರಗಿತು.

ಸಂಘವು 31.03.2022ಕ್ಕೆ ಅಂತ್ಯವಾದ, 2021–22ನೇ ಸಾಲಿನಲ್ಲಿ ರೂ.9.04 ಕೋಟಿ ನಿವ್ವಳ ಲಾಭ ಗಳಿಸಿದ್ದು, ಲಾಭ ವಿಂಗಡಣೆ ಯಲ್ಲಿ ಸದಸ್ಯರಿಗೆ ಶೇ.25 ಡಿವಿಡೆಂಡ್‌ನ್ನು ನೀಡಲು ಮಹಾಸಭೆಯು ನಿರ್ಧರಿಸಿದೆ.

2021–22ನೇ ಸಾಲಿನಲ್ಲಿ ಠೇವಣಾತಿ ಮತ್ತು ಸಾಲ ಸೇರಿದಂತೆ ಒಟ್ಟು ರೂ.129 ಕೋಟಿ ಹೆಚ್ಚಳದೊಂದಿಗೆ ಸಾರ್ವಕಾಲಿಕ ವೃದ್ಧಿಯನ್ನು ದಾಖಲಿಸಿರುವುದನ್ನು, ಸ್ಥಾಪನೆಯ 28 ವರ್ಷಗಳಲ್ಲಿ ರೂ.690 ಕೋಟಿ ಮೀರಿದ ಒಟ್ಟು ವ್ಯವಹಾರದ (ಠೇವಣಿ + ಸಾಲ) ಮೈಲಿಗಲ್ಲುಗಳನ್ನು ದಾಟಿದ ಅವಿಭಜಿತ ದಕ್ಷಿಣ ಕನ್ನಡ ಜಿಲ್ಲೆಯ ಪ್ರಪ್ರಥಮ ಕ್ರೆಡಿಟ್ ಕೋ–ಓಪರೇಟಿವ್ ಆಗಿ ಸಂಘವು ಮೂಡಿಬಂದಿದೆ ಎಂದು ಸಂಘದ ಅಧ್ಯಕ್ಷರಾದ ಶ್ರೀ ಕೆ. ಜೈರಾಜ್ ಬಿ. ರೈ ರವರು ಸಭೆಗೆ ತಿಳಿಸಿದರು.

ಪ್ರಭಾರ ಮಹಾಪ್ರಬಂಧಕ ಶ್ರೀ ಗಣೇಶ್ ಜಿ.ಕೆ. ಲೆಕ್ಕಪರಿಶೋಧಿತ ಆರ್ಥಿಕ ತಖ್ತೆ, ಲಾಭ ವಿಂಗಡಣೆ, ಬಜೆಟ್ ಮತ್ತು ಬೈಲಾ ತಿದ್ದುಪಡಿ ಪ್ರಸ್ತಾವನೆಗಳನ್ನು ಮಂಡಿಸಿದರು. 2021–22 ಸಾಲಿನಲ್ಲಿ ಅತ್ಯುತ್ತಮ ಕಾರ್ಯನಿರ್ವಹಣೆ ತೋರಿ ಪ್ರಗತಿ ಸಾಧಿಸಿದ ಶಾಖೆಗಳನ್ನು ಗೌರವಿಸಲಾಯಿತು. ಸ್ಥಾಪಕಾಧ್ಯಕ್ಷ ದಿ। ಕೆ.ಬಿ. ಜಯಪಾಲ ಶೆಟ್ಟಿ ಸ್ಮರಣಾರ್ಥ ಪ್ರತಿಭಾ ಪುರಸ್ಕಾರವನ್ನು, 2021–22 ಸಾಲಿನಲ್ಲಿ ಎಸ್.ಎಸ್.ಎಲ್.ಸಿ. ಪರೀಕ್ಷೆಯಲ್ಲಿ ಉತ್ತಮ ಸಾಧನೆ ಮಾಡಿದ ಸಿಬ್ಬಂದಿಗಳ ಮಕ್ಕಳಾದ ಮಾಸ್ಟರ್ ಅಭಿಷೇಕ್ ಶೆಟ್ಟಿ (ಶೇ.95.68 ಅಂಕ) ಮತ್ತು ಕುಮಾರಿ ಜಾಗೃತಿ ಟಿ ಶೆಟ್ಟಿ (ಶೇ.94.40 ಅಂಕ) ಯವರಿಗೆ ಪ್ರದಾನ ಮಾಡಿ ಸನ್ಮಾನಿಸಲಾಯಿತು.

ಸಂಘದ ಉಪಾಧ್ಯಕ್ಷರಾದ ಶ್ರೀಮತಿ ಲಕ್ಷ್ಮಿ ಜಯಪಾಲ ಶೆಟ್ಟಿ ಹಾಗೂ ನಿರ್ದೇಶಕರಾದ ಶ್ರೀಮತಿ ಎ. ರತ್ನಕಾಂತಿ ಶೆಟ್ಟಿ, ಶ್ರೀ ಕೆ. ಸೀತಾರಾಮ ರೈ ಸವಣೂರು, ಡಾ। ಕೆ. ಸುಭಾಷ್ಚಂದ್ರ ಶೆಟ್ಟಿ, ಶ್ರೀ ಪಿ. ಎಸ್. ಅಡ್ಯಂತಾಯ, ಸಿಎ ಹೆಚ್.ಆರ್ ಶೆಟ್ಟಿ, ಶ್ರೀ ವಿಠಲ ಪಿ. ಶೆಟ್ಟಿ, ಶ್ರೀ ಯಂ. ರಾಮಯ ಶೆಟ್ಟಿ, ಶ್ರೀ ಅರುಣ್ ಕುಮಾರ್ ಶೆಟ್ಟಿ, ಶ್ರೀ ಪಿ.ಬಿ. ದಿವಾಕರ ರೈ, ಶ್ರೀ ರವೀಂದ್ರನಾಥ ಜಿ. ಹೆಗ್ಡೆ, ಶ್ರೀ ಕುಂಬ್ರ ದಯಾಕರ್ ಆಳ್ವ, ಶ್ರೀ ಬೆಳ್ಳಿಪಾಡಿ ಪ್ರಸಾದ್ ಕೌಶಲ್ ಶೆಟ್ಟಿ, ಡಾ। ಎಂ. ಸುಧಾಕರ ಶೆಟ್ಟಿ ಮತ್ತು ಶ್ರೀ ಅರಿಯಡ್ಕ ಚಿಕ್ಕಪ್ಪ ನ್ಯಾಕ್ ಉಪಸ್ಥಿತರಿದ್ದರು. ಸಂಘದ ಸದಸ್ಯರು ಹಾಗೂ ಸಿಬ್ಬಂದಿಗಳು ಮಹಾಸಭೆಯ ಕಾರ್ಯಕ್ರಮದಲ್ಲಿ ಸಕ್ರಿಯವಾಗಿ ಪಾಲ್ಗೊಂಡರು.

# ಶ್ರೀ ರಾಮಕೃಷ್ಣ ಕ್ರೆಡಿಟ್ ಕೋ–ಓಪರೇಟಿವ್ ಸೊಸೈಟಿಗೆ "ಸಾಧನಾ ಪ್ರಶಸ್ತಿ 2021–22"



ಮಂಗಳೂರಿನ ಶ್ರೀ ರಾಮಕೃಷ್ಣ ಕ್ರೆಡಿಟ್ ಕೋ–ಓಪರೇಟಿವ್ ಸೊಸೈಟಿಗೆ 2021–22ನೇ ಸಾಲಿನಲ್ಲಿ ವ್ಯವಹಾರದಲ್ಲಿ ಸಾಧಿಸಿದ ಸರ್ವತೋಮುಖ ಅಭಿವೃದ್ಧಿಗಾಗಿ "ಎಸ್.ಸಿ.ಡಿ.ಸಿ.ಸಿ. ಬ್ಯಾಂಕ್ ಸಾಧನಾ ಪ್ರಶಸ್ತಿ 2021–22" ಲಭಿಸಿದೆ. ದಿನಾಂಕ 05.08.2022ರಂದು ಜರುಗಿದ ಎಸ್.ಸಿ.ಡಿ.ಸಿ.ಸಿ. ಬ್ಯಾಂಕಿನ ಮಹಾಸಭೆಯಲ್ಲಿ, ಬ್ಯಾಂಕಿನ ಅಧ್ಯಕ್ಷರಾದ ಡಾ. ಎಂ.ಎನ್. ರಾಜೇಂದ್ರ ಕುಮಾರ್‌ರವರು ಸಾಧನಾ ಪ್ರಶಸ್ತಿಯನ್ನು ಸಂಘದ ಅಧ್ಯಕ್ಷರಾದ ಶ್ರೀ ಕೆ. ಜೈರಾಜ್ ಬಿ. ರೈಯವರಿಗೆ ಹಾಗೂ ಪ್ರಭಾರ ಮಹಾಪ್ರಬಂಧಕ ಶ್ರೀ ಗಣೇಶ್ ಜಿ.ಕೆ.ಯವರಿಗೆ ಪ್ರದಾನ ಮಾಡಿದರು. ಸಂಘದ ನಿರ್ದೇಶಕರುಗಳಾದ ಶ್ರೀ ಕುಂಬ್ರ ದಯಾಕರ ಆಳ್ವ ಮತ್ತು ಶ್ರೀ ಬೆಳ್ಳಿಪಾಡಿ ಪ್ರಸಾದ್ ಕೌಶಲ್ ಶೆಟ್ಟಿಯವರು ಉಪಸ್ಥಿತರಿದ್ದರು. ಈ ಪ್ರಶಸ್ತಿಯು ಸಂಘಕ್ಕೆ 11ನೇ ಬಾರಿ, ಹಾಗೂ 6 ವರ್ಷಗಳಿಂದ ನಿರಂತರವಾಗಿ ಲಭಿಸಿದೆ.

# ಶ್ರೀ ರಾಮಕೃಷ್ಣ ಕ್ರೆಡಿಟ್ ಕೋ-ಓಪರೇಟಿವ್ ಸೊಸೈಟಿ ಲಿ. ಇದರ ಉಡುಪಿ ನಗರ ಶಾಖೆಯ ನೂತನ ಕಛೇರಿಯ ಉದ್ಘಾಟನಾ ಸಮಾರಂಭ



ಮಂಗಳೂರಿನ ಪ್ರತಿಷ್ಠಿತ ಸಹಕಾರ ಸಂಘವಾದ ಶ್ರೀ ರಾಮಕೃಷ್ಣ ಕ್ರೆಡಿಟ್ ಕೋ-ಓಪರೇಟಿವ್ ಸೊಸೈಟಿಯು ಉಡುಪಿ ನಗರ ಶಾಖೆಯನ್ನು ಉಡುಪಿ ಜಿಲ್ಲಾ ಖಜಾನೆ ಕಛೇರಿ ಬಳಿಯಿರುವ ಕೆನರಾ ಟವರ್ಸ್ ಕಟ್ಟಡದ ಸುಸಜ್ಜಿತ ನೂತನ ಕಛೇರಿಗೆ ದಿನಾಂಕ 15.07.2022ರ ಶುಕ್ರವಾರದಂದು ಸ್ಥಳಾಂತರಿಸಲಾಯಿತು. ಈ ನೂತನ ಕಛೇರಿಯ ಉದ್ಘಾಟನೆಯನ್ನು ಸಂಘದ ಅಧ್ಯಕ್ಷರಾದ ಶ್ರೀ ಕೆ. ಜೈರಾಜ್ ಬಿ. ರೈಯವರು ನೆರವೇರಿಸಿದರು.

## ಸಹಕಾರ ರತ್ನ ಶ್ರೀ ಕೆ. ಸೀತಾರಾಮ ರೈ ಸವಣೂರುರವರಿಗೆ ಸಂಘದ ವತಿಯಿಂದ 28ನೇ ವಾರ್ಷಿಕ ಮಹಾಸಭೆಯಲ್ಲಿ ಸನ್ಮಾನ




ಕರ್ನಾಟಕ ಸರಕಾರದ ಪ್ರತಿಷ್ಠಿತ ಸಹಕಾರ ರತ್ನ ಪ್ರಶಸ್ತಿ ಪುರಸ್ಕೃತರಾದ ಸಂಘದ ನಿರ್ದೇಶಕರಾದ ಸನ್ಮಾನ್ಯ ಶ್ರೀ ಕೆ. ಸೀತಾರಾಮ ರೈ ಸವಣೂರುರವರನ್ನು ಪತ್ನಿ ಶ್ರೀಮತಿ ಕಸ್ತೂರಿಕಲಾ ಎಸ್. ರೈಯವರೊಂದಿಗೆ ಸಪತ್ನೀಕರಾಗಿ 28.08.2022ರಂದು ಜರಗಿದ 2021-22ನೇ ಸಾಲಿನ ಸಂಘದ ವಾರ್ಷಿಕ ಮಹಾಸಭೆಯಲ್ಲಿ ಸಂಘದ ವತಿಯಿಂದ ಸನ್ಮಾನಿಸಲಾಯಿತು.

## ಗೌರವಾಭಿನಂದನೆಗಳು



ಕರ್ನಾಟಕ ರಾಜ್ಯ ಸಹಕಾರ ಮಾರಾಟ ಮಹಾಮಂಡಳ ನಿ., ಬೆಂಗಳೂರು ಇದರ ಅಧ್ಯಕ್ಷರಾಗಿ ಎರಡನೇ ಬಾರಿ ಅವಿರೋಧವಾಗಿ ಆಯ್ಕೆಗೊಂಡಿರುವ ಸಹಕಾರ ರತ್ನ ಡಾ। ಎಂ.ಎನ್. ರಾಜೇಂದ್ರ ಕುಮಾರ್‌ರವರಿಗೆ ದಿನಾಂಕ 24.09.2022ರ ಅಭಿನಂದನಾ ಸಮಾರಂಭದಲ್ಲಿ ಸಂಘದ ವತಿಯಿಂದ ಗೌರವಾರ್ಪಣೆ.

## ಅಭಿನಂದನೆಗಳು



ಸುಳ್ಯ ಯುವಜನ ಸಂಯುಕ್ತ ಮಂಡಳಿ ಹಾಗೂ ಯುವಜನ ಸೇವಾ ಸಂಸ್ಥೆಯ ವತಿಯಿಂದ ನೀಡುವ ಗಾಂಧಿಸ್ಮೃತಿ ಪ್ರಶಸ್ತಿಗೆ ಭಾಜನರಾದ ಸಂಘದ ನಿರ್ದೇಶಕರಾದ ಶ್ರೀ ಪಿ.ಬಿ. ದಿವಾಕರ ರೈಯವರಿಗೆ ಆಡಳಿತ ಮಂಡಳಿ ಸಭೆಯಲ್ಲಿ ಸಂಘದ ವತಿಯಿಂದ ಅಭಿನಂದನೆಯನ್ನು ಸಲ್ಲಿಸಲಾಯಿತು.

## ಸಂಘದ ಸಿಬ್ಬಂದಿಗಳಿಗೆ 'ಸಾಫ್ಟ್‌ವೇರ್' ತರಬೇತಿ ಕಾರ್ಯಕ್ರಮದ ಉದ್ಘಾಟನೆ




ಸಂಘದ ಸಿಬ್ಬಂದಿಗಳಿಗೆ ಮೆ. ಆಟೋಮೇಶನ್ ಕ್ಲೌಡ್ ಸೊಲ್ಯೂಷನ್ ಪ್ರೈ ಲಿ. ಇವರಿಂದ ದಿನಾಂಕ 24.07.2022ರಂದು ತರಬೇತಿ ಕಾರ್ಯಕ್ರಮ ಜರಗಿತು.



ಮಂಗಳೂರು ನಗರದ ಬಂಟ್ಸ್ ಹಾಸ್ಟೆಲ್ ವೃತ್ತದ ಟ್ರಾಫಿಕ್ ಪೋಲೀಸ್ ಚೌಕಿಗೆ ಸಂಘದ ವತಿಯಿಂದ ಆಸನ ವ್ಯವಸ್ಥೆಯನ್ನು ಕೊಡುಗೆಯಾಗಿ ನೀಡಲಾಯಿತು.

## ಅಭಿನಂದನೆಗಳು

❖ ಸಂಘದ ಉಡುಪಿ ನಗರ ಶಾಖೆಯ ಸಿಬ್ಬಂದಿ ಶ್ರೀಮತಿ ಲಾವಣ್ಯರವರು ಹೆಣ್ಣು ಮಗುವಿನ ತಾಯಿಯಾಗಿದ್ದಾರೆ. ಇವರಿಗೆ ಹಾರ್ದಿಕ ಅಭಿನಂದನೆಗಳು.

## ಹುಟ್ಟು ಹಬ್ಬದ ಶುಭಾಶಯಗಳು

ಅಕ್ಟೋಬರ್ 2022ರಿಂದ, ಡಿಸೆಂಬರ್ 2022ರ ಅವಧಿಯಲ್ಲಿ ಜನ್ಮದಿನವನ್ನು ಆಚರಿಸುವ ತಮಗೆಲ್ಲರಿಗೂ ಹುಟ್ಟು ಹಬ್ಬದ ಹಾರ್ದಿಕ ಶುಭಾಶಯಗಳು

| ಸಿಬ್ಬಂದಿಗಳ ಹೆಸರು | ಮತ್ತು ಶಾಖೆ | ಸಿಬ್ಬಂದಿಗಳ ಹೆಸರು | ಮತ್ತು ಶಾಖೆ |
|---|---|---|---|
| ಶ್ರೀಮತಿ ಯಶೋಧ ನ್ಯಾಕ್ | ಮುಲ್ಕಿ | ಶ್ರೀ ರಕ್ಷಿತ್ ಆರ್. ಶೆಟ್ಟಿ | ವೆಲೆನ್ಸೀಯಾ |
| ಶ್ರೀ ಅಣ್ಣಪ್ಪ ಶೆಟ್ಟಿ | ಉಡುಪಿ | ಶ್ರೀಮತಿ ಸೌಮ್ಯ ರಾಣಿ | ಮುಡಿಪು |
| ಶ್ರೀಮತಿ ಸವಿತಾ ಪೂಂಜಾ | ಚಿಲಿಂಬಿ | ಶ್ರೀ ಧನಂಜಯ ಕುಮಾರ್ | ಉಡುಪಿ ನಗರ |
| ಶ್ರೀ ಸಂತೋಷ್ | ಕುಂದಾಪುರ | ಶ್ರೀ ಶಮಂತ್ ಟಿ. ರೈ | ಕೇಂದ್ರ ಕಛೇರಿ |
| ಶ್ರೀಮತಿ ನಂದಿತಾ ಆಚಾರ್ಯ | ಹಂಪನಕಟ್ಟೆ | ಕು. ಸುಶ್ಮಿತ | ಉಡುಪಿ |
| ಕು. ಪೂರ್ಣಿಮ | ಹೆಬ್ರಿ | | |

## ಶ್ರದ್ಧಾಂಜಲಿ

✦ ಸಂಘದ ಹಿರಿಯ ಸದಸ್ಯರಾದ ಪ್ರೊ. ಶ್ರೀಮತಿ ಎ. ಪ್ರೇಮಲತಾ ಶೆಟ್ಟಿ (ಸಂಘದ ನಿರ್ದೇಶಕರಾದ ಶ್ರೀಮತಿ ಎ. ರತ್ನಕಾಂತಿ ಶೆಟ್ಟಿಯವರ ಸಹೋದರಿ).

✦ ಸಂಘದ ಮುಲ್ಕಿ ಶಾಖಾ ಸಲಹಾ ಸಮಿತಿ ಸದಸ್ಯರಾದ ಶ್ರೀ ಎಚ್. ರಾಮಕೃಷ್ಣ ಶೆಟ್ಟಿ,

ಅಗಲಿದ ದಿವ್ಯ ಚೇತನಗಳಿಗೆ ಚಿರಶಾಂತಿ ಕೋರಿಕೊಂಡು, ಸಂಘದ ಪರವಾಗಿ ಭಾವಪೂರ್ಣ ಶ್ರದ್ಧಾಂಜಲಿಯನ್ನು ಅರ್ಪಿಸುತ್ತೇವೆ.

Private Circulation only

BOOK-POST

To,

If not delivered please return to :
**SRI RAMAKRISHNA CREDIT CO-OP. SOCIETY LTD.**
2nd Floor, Amruthotsava Building, Bunts Hostel Circle, Mangalore - 575 003.